ಆ) ಹಾಗಿದ್ದಲ್ಲಿ ಆದನ್ನು ಪೂರ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ಹಾಗೂ ಆದನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು)—

ಆ) ಹೌದು.

ಆ) ಸದರಿ ಕಟ್ಟಡವನ್ನು ಆಹಾರ ಧಾನ್ಯಗಳನ್ನು ಪಾರಾಟ ಮಾಡಿದ ಹೆಚ್ಚುವರಿ ಉಶ್ಣತ್ವೆಯಿಂದ ಮುಗಿಸಲು ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ) ಬೆಳಗಾಂವ್, ಇವರಿಗೆ ತಿಳಿಸಿರುತ್ತದೆ. ಒಂದುವೇಳೆ ಸಾಧ್ಯವಾಗದಿದ್ದಲ್ಲಿ, ಈ ಕಾಮಗಾರಿಯನ್ನು ೧೯೮೨–೮೫ನೇ ಸಾಲಿನ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಯೋಜನೆಯ ಕೆಲಸ ಯೋಜನೆಯಲ್ಲಿ ಅಳವಡಿಸಿಕೊಂಡು ಪೂರ್ತಿಗೊಳಿಸಲು ಆದೇಶ ಕೊಟ್ಟಿರುತ್ತದೆ.

ಸಿರ್ಸಿ ಸಿದ್ದಾಪುರ ಕೊಳವೆ ಬಾವಿಗಳ ಬಗ್ಗೆ

೧೪೭೭ (೧೫ ಸಿ) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮಿಣಾಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಆ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಿದ್ದಾಪುರದಲ್ಲಿ ಕೊಳವೆ ಬಾವಿಗಳು ವಿಫಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಪ್ರದೇಶದಲ್ಲಿ ತೆರೆದ ಬಾವಿಗಳನ್ನು ತೋಡಲು ಸರಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಆ) ಬಂದಿದೆ.

ಆ) ಎಲ್ಲಿ ಕೊಳವೆ ಬಾವಿಯು ವಿಫಲವಾಗಿದೆಯೋ ಅಲ್ಲಿ ಮತ್ತೊಂದು ಕೊಳವೆ ಬಾವಿ ಸ್ಥಳವನ್ನು ಗುರುತಿಸಿ ಯಶಸ್ವಿ ಕೊಳವೆ ಬಾವಿಯನ್ನು ಕೊರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ವಿಫಲವಾದ ೬ ಇಂಗಲ ಕೊಳವೆ ಬಾವಿಗಳನ್ನು ಪುನರ್ ತನಿಖೆ ಮಾಡಿ ಪುನರುಜ್ಜೀವನ ಮಾಡಬುಹುದಾದ ಎಲ್ಲ ಕೊಳವೆ ಬಾವಿಯನ್ನು ಳ್ಳ ವ್ಯಾಸದ ಕೊಳವೆ ಬಾವಿ ಕೊರೆಯುವ ಯಂತ್ರದಿಂದ ಆಳ ಮಾಡಿ ವಿಫಲವಾದ ಕೊಳವೆ ಬಾವಿಯನ್ನು ಯಶಸ್ವಿ ಮಾಡಲು ಪ್ರಯತ್ನ ಮಾಡಲಾಗಿದೆ. ಎಲ್ಲಿ ಕೊಳವೆ ಬಾವಿಗಳು ಯಶಸ್ವಿಯಾಗುವುದಿಲ್ಲವೋ ಅಲ್ಲಿ ತೆರೆದ ಬಾವಿ ತೆಗೆಯಲು ಕ್ರಮ ಕೈಗೊಳ್ಳಲಾಗುತ್ತದೆ.

ಬೆಂಗಳೂರಿಂ ಮಹಾ ನಗರ ಪಾಲಿಕೆಯು ತೆರಿಗೆ ಹೆಚ್ಚಿಸಿರುವ ಬಗ್ಗೆ

೧೪೮೮ (೫೫೫) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ, ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಆ) ಬೆಂಗಳೂರು ಮಹಾ ನಗರ ಪಾಲಿಕೆಯವರು ಬೆಂಗಳೂರು ಮನೆ ಕಂದಾಯವನ್ನು ಹೆಚ್ಚಿಸಲು ನೋಟಿಸುಗಳನ್ನು ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ತೆರಿಗೆಯ ಬಗ್ಗೆ ಜನತೆಯ ಮುಖ್ಯ, ಸಾರ್ವಜನಿಕ ಸಂಘಟನೆಗಳ ಮುಖ್ಯ ತೀವ್ರ ಆಕ್ಷೇಪ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈಗಿರುವ ಕಂದಾಯವನ್ನು ಸರಿಯಾಗಿ ವಸೂಲಿ ಮಾಡಿದಲ್ಲಿ ಮನೆ ಕಂದಾಯವನ್ನು ಸದ್ಯದಲ್ಲಿ ಹೆಚ್ಚಿಸಲೇಬೇಕಾಗಿಲ್ಲವೆಂದು ಸರಕಾರದವರು ಒಪ್ಪುತ್ತಾರೆಯೇ?

ಈ) ಜನತೆಯ ಅಭಿಪ್ರಾಯಕ್ಕನುಗುಣವಾಗಿ ಸರಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?